**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,ನಾಗಮಂಗಲ.**

**ಅಸಲು ದಾವಾ ಸಂಖ್ಯೆ. 130/2017**

**ವಾ.ಸಾ-1**

**ಸಾಕ್ಷಿಗೆ ದಿನಾಂಕಃ 27-10-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ.ಜೆ.ಕೆ.ಆರ್ ಪ್ರತಿವಾದಿಯರ ಪರ ವಕೀಲರಿಂದಃ**

1. ದಾವಾ ಸ್ವತ್ತು ಮೊದಲು ಗ್ರಾಮ ಠಾಣ ಸ್ವತ್ತು. ಬೋಗಾದಿ ಗ್ರಾಮ ಪಂಚಾಯ್ತಿ ಇಂದ ನನಗೆ ಮಂಜೂರು ಆಗಿರುತ್ತದೆ. 2014 ರಲ್ಲಿ ಮಂಜೂರು ಆಗಿದೆ. ನಿಖರವಾದ ದಿನಾಂಕ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ನನಗೆ ಮಂಜೂರು ಆಗಿದೆ ಎಂದು ತೋರಿಸಲು ಮಾನ್ಯ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರು ಪಡಿಸಿದ್ದೇನೆ. ದಾವಾ ಸ್ವತ್ತಿನ ಮಂಜೂರಾತಿ ಪತ್ರ ಇಲ್ಲ. ಸಾಕ್ಷಿಯು ಮುಂದುವರೆದು ಅದನ್ನು ನನಗೆ ಕೊಟ್ಟಿಲ್ಲ ಎಂದು ನುಡಿಯುವರು.

2. ದಾವಾ ಸ್ವತ್ತಿನ ದಾಖಲಾತಿಗಳು ಮಂಜೂರಾತಿಯ ಆಧಾರದ ಮೇಲೆ ನನ್ನ ಹೆಸರಿಗೆ ಬಂದಿವೆ. ನನ್ನ ಹೆಸರಿಗೆ ದಾವಾ ಸ್ವತ್ತು 2014 ರಲ್ಲಿ ಬಂದಿದೆ. ಮಾನ್ಯ ನ್ಯಾಯಾಲಯದಲ್ಲಿ ಹಾಜರು ಪಡಿಸಿರುವ ದಾಖಲಾತಿಗಳನ್ನು ಹೊರತು ಪಡಿಸಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಬೇರೆ ಯಾವ ದಾಖಲಾತಿಗಳು ನನ್ನ ಬಳಿ ಇಲ್ಲ.

3. ಪ್ರತಿವಾದಿಯರಿಗೆ ಅವರು ಮನೆ ಕಟ್ಟಿರುವ ಸ್ವತ್ತು ಬೇರೆಯವರಿಂದ ಖರಿಲದಿಸಿದ್ದಾರೆ. ಪ್ರತಿವಾದಿಗಳು ಆಸ್ತಿಯನ್ನು ಯಾವ ವರ್ಷದಲ್ಲಿ ಖರೀದಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆಸ್ತಿಯನ್ನು ನಂಜಮ್ಮ ಮತ್ತು ಕೃಷ್ಣ ಶೆಟ್ಟಿ ಎಂಬುವವರಿಂದ ಖರೀದಿಸಿದ್ದಾರೆ. ಈ ಹಂತದಲ್ಲಿ ಸಾಕ್ಷಿಗೆ ದಿನಾಂಕ 19.01.2004 ರ ಕ್ರಯ ಪತ್ರವನ್ನು ತೋರಿಸಿ ಮಾರಾಟಗಾರರ ಮತ್ತು ಖರೀದಿದಾರರ ವಿವವರಗಳನ್ನು ಹೇಳಿ ಸದರಿ ಖರೀದಿ ಪತ್ರದಂತೆಯೇ ಪ್ರತಿವಾದಿಯರು ಆಸ್ತಿಯನ್ನು ಖರೀದಿಸಿದ್ದಾರೆ ಎಂದರೆ ಸಾಕ್ಷಿಯು ಹೌದು ಎಂದು ಉತ್ತರಿಸುತ್ತಾರೆ. **ಸದರಿ ಖರೀದಿ ಪತ್ರವನ್ನು ಸಾಕ್ಷಿಯು ಒಪ್ಪಿಕೊಂಡ ಮೇರೆಗೆ ಅದನ್ನು ನಿಡಿ-1 ಎಂದು ಗುರುತಿಸಲಾಯಿತು.**

4. ನಿಡಿ-1 ರ ಆಸ್ತಿಯಲ್ಲಿ ಪ್ರತಿವಾದಿಯರು ಮನೆ ಕಟ್ಟಿಕೊಂಡಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಪ್ರತಿವಾದಿಯರು ನಿಡಿ-1 ರಂತೆ 25 20 ಅಡಿಗಳಷ್ಟು ಜಾಗವನ್ನು ಮಾತ್ರ ಖರೀದಿಸಲಾಗಿದೆ, ಆದರೆ 30 25 ರಂತೆ ತಿದ್ದುಪಡಿ ಮಾಡಿ ನನಗೆ ತೊಂದರೆ ಮಾಡಬೇಕೆಂದು ಮನೆ ಕಟ್ಟಿಕೊಂಡಿದ್ದಾರೆ ಎಂದು ಉತ್ತರಿಸುವರು. ನಿಡಿ1 ರಲ್ಲಿರುವ ಆಸ್ತಿಯ ವಿಸ್ತೀರ್ಣಕ್ಕಿಂತ ಹೆಚ್ಚಿನ ಜಾಗದಲ್ಲಿ ಮನೆಯನ್ನು ಕಟ್ಟಿದ್ದಾರೆ. ಸಾಕ್ಷಿಯು ಮುಂದುವರೆದು ನನ್ನ ಜಾಗಕ್ಕೆ ಒತ್ತುವರಿ ಮಾಡಿ ಕಟ್ಟಿದ್ದಾರೆ ಎಂದು ನುಡಿಯುವರು.

5. ಪ್ರತಿವಾದಿಯರು ಮನೆಯನ್ನು ಪೂರ್ವ ಪಶ್ಚಿಮ 30 ಅಡಿ ಮತ್ತು ಉತ್ತರ ದಕ್ಷಿಣ 25 ಅಡಿ ಜಾಗದಲ್ಲಿ ಕಟ್ಟಿದ್ದಾರೆ. ನಿಡಿ-1 ರಲ್ಲಿ ಆಸ್ತಿಯ ಅಳತೆಯನ್ನು ಎಷ್ಟು ತೋರಿಸಿದ್ದಾರೆ ಎಂದು ನಾನು ನೋಡಿಲ್ಲ. ಪ್ರತಿವಾದಿಯರ ಆಸ್ತಿಯ ದಾಖಲಾತಿಗಳ ಆದಾರದ ಮೇಲೆ ಹೆಚ್ಚುವರಿ ಜಾಗದಲ್ಲಿ ಮನೆ ಕಟ್ಟಿದ್ದಾರೆ ಎಂದು ಹೇಳುತಿದ್ದೇನೆ.

6. ದಾವೆಯನ್ನು ಸಲ್ಲಿಸುವ ಹಂತದಲ್ಲಿ ಪ್ರತಿವಾದಿಯರ ಮನೆಯು ಕಿಟಗಿ ಹಂತದವರೆಗೆ ನಿರ್ಮಾಣವಾಗಿತ್ತು ಎಂದರೆ ಸರಿಯಲ್ಲ. ನಾನು ದಾವೆ ಸಲ್ಲಿಸುವಾಗ ಪ್ರತಿವಾದಿಯರು ಅಡಿ ಪಾಯತೆಗೆಯಲು ಪ್ರಾರಂಭಮಾಡಿದ್ದರು. ಪ್ರತಿವಾದ ಪತ್ರದಲ್ಲಿ ಇರುವ ವಿಷಯವನ್ನು ನಾನು ತಿಳಿದುಕೊಂಡಿಲ್ಲ. ಪ್ರತಿವಾದಿರು ನಾನು ದಾವೆಯನ್ನು ಸಲ್ಲಿಸುವ ಮೊದಲೆ ಮನೆ ನಿರ್ಮಾಣ ಮಾಡಲು ಪ್ರಾರಂಭಿಸಿದರು ಮತ್ತು ದಿನಾಂಕ 30.12.201 ರಂದು ಸರ್ಕಾರದಿಂದ 37,300/- ರೂಗಳನ್ನು ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಹಣವನ್ನು 1 ನೇ ಪ್ರತಿವಾದಿಯ ಖಾತೆಗೆ ಜಮ ಆಗಿತ್ತು ಎಂದರೆ ಸರಿಯಲ್ಲ.

7. ಪ್ರತಿವಾದಿಯರು ತಮ್ಮ ಮನೆಯ ದಾಖಲಾತಿಗಳಲ್ಲಿ ಅಳತೆಯನ್ನು ತಿದ್ದುಪಡಿ ಮಾಡಿಕೊಂಡಿದ್ದಾರೆ ಎಂದು ನನಗೆ 2017 ರಲ್ಲಿ ತಿಳಿಯಿತು. ಸದರಿ

ತಿದ್ದುಪಡಿಯನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಿದ್ದೇನೆ. ಈ ಕುರಿತು ಬೋಗಾದಿ ಗ್ರಾಮ ಪಂಚಾಯ್ತಿ ಮತ್ತು ತಾಲ್ಲೂಕು ಪಂಚಾಯ್ತಿಯಲ್ಲಿ ಅರ್ಜಿ ಸಲ್ಲಿಸಿದ್ದೇನೆ. ಪ್ರತಿವಾದಿಯರ ಆಸ್ತಿಗಳ ದಾಖಲಾತಿಗಳಲ್ಲಿ ತಿದ್ದುಪಡಿಯು ನಿಡಿ-1 ರ ಕ್ರಯ ಪತ್ರದ ನಂತರ ಆಗಿದೆಯೇ ಅಥವಾ ಅದಕ್ಕಿಂತ ಮೊದಲೇ ಆಗಿತ್ತೊ ಎಂದು ನಾನು ತಿಳಿದುಕೊಂಡಿರುವುದಿಲ್ಲ.

8. ನಿಡಿ-1 ರಲ್ಲಿರುವ ಆಸ್ತಿಯ ಅಳತೆಯನ್ನೇ ಪ್ರತಿವಾದಿಯರ ಆಸ್ತಿಯ ದಾಖಲಾತಿಗಳಲ್ಲಿ ನಮೂದು ಮಾಡಲಾಗಿದೆ. ನಾನು ನಿಡಿ-1 ಅನ್ನು ಎಲ್ಲಿಯೂ ಪ್ರಶ್ನಿಸಿಲ್ಲ. ಪ್ರತಿವಾದಿಯರ ಮನೆಯು ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿಗೆ ಬರುತ್ತದೆ. ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿಗೆ ಪ್ರತಿವಾದಿಯರ ಮನೆ ಬರುತ್ತದೆ ಎಂದು ದಾಖಲಾತಿಯಲ್ಲೂ ಇದೆ. ನಾನು ಮಾನ್ಯ ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ದಾಖಲಾತಿಗಳಲ್ಲಿ ದಾವಾ ಸ್ವತ್ತಿನ ಪಶ್ಚಿಮಕ್ಕೆ ಸರ್ಕಾರಿ ಜಾಗ ಎಂದು ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮೊದಲು ಸರ್ಕಾರಿ ಜಾಗ ಇತ್ತು, ಸದರಿ ಜಾಗ ಬೇರೆಯವರಿಗೆ ಮಂಜೂರು ಆಗಿತ್ತು ಮತ್ತು ಅದನ್ನು ಪ್ರತಿವಾದಿಯರು ಖರೀದಿಸಿದ್ದಾರೆ ಎಂದು ನುಡಿಯುವರು.

9. 2004 ರಲ್ಲಿಯೇ ಪ್ರತಿವಾದಿಯರು ಆಸ್ತಿಯನ್ನು ಖರೀದಿಸಿದ್ದು ಅದನ್ನು ದಾವೆಯಲ್ಲಿ ಪಶ್ಚಿಮಕ್ಕೆ ತೋರಿಸಲು ಯಾವುದೇ ತೊಂದರೆ ಇರಲಿಲ್ಲ. ಪ್ರತಿವಾದಿಯರ ಪೂರ್ವಕ್ಕೆ ದಾವಾ ಸ್ವತ್ತು ಇಲ್ಲ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ಹೇಳಿರುವ ಚಕ್ಕುಬಂದಿಯಂತೆ ದಾವಾ ಸ್ವತ್ತು ಅಸ್ತಿತ್ವದಲ್ಲಿಯೇ ಇಲ್ಲ ಎಂದರೆ ಸರಿಯಲ್ಲ.

10. ದಿನಾಂಕ 28.06.2017 ರಂದು ಪ್ರತಿವಾದಿಯರ ಮನೆಯ ನಿರ್ಮಾಣವು ಯಾವ ಹಂತದಲ್ಲಿ ಇತ್ತು ಎಂದು ದಾಖಲಾತಿಗಳನ್ನು ಹಾಜರು ಪಡಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಹಾಜರು ಪಡಿಸಿರಬಹುದು ಆದರೆ ಅವುಗಳು ಸುಳ್ಳು ದಾಖಲಾತಿಗಳು ಎಂದು ನುಡಿಯುವರು. ಪ್ರತಿವಾದಿಯರು ಅವರ ಜಾಗದಲ್ಲಿಯೇ ಮನೆಯನ್ನು ಕಟ್ಟಿಕೊಂಡಿದ್ದಾರೆ ಮತ್ತು ಯಾವುದೇ ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ.

11. ದಾವಾ ಸ್ವತ್ತು ನನಗೆ ಮಂಜೂರು ಆಗಿಲ್ಲ ಎಂದರೆ ಸರಿಯಲ್ಲ. ಮಂಜೂರಾತಿಯ ದಾಖಲಾತಿಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ದಾವೆಯನ್ನು ಸಲ್ಲಿಸುವ ಮೊದಲು ದಿನಾಂಕ 16.02.2017 ರಂದು ತಾಲ್ಲೂಕು ಪಂಚಾಯ್ತಿಗೆ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ದಾವಾ ಸ್ವತ್ತನ್ನು ಗುರುತಿಸಿಕೊಡುವಂತೆ ನಿಪಿ-14 ರಂತೆ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಆಸ್ತಿಯನ್ನು ಅಳತೆ ಮಾಡಿಸಿ ಗುರುತಿಸಿಕೊಡುವಂತೆ ಅರ್ಜಿ ಸಲ್ಲಿಸಿದ್ದೆ. 2014 ರಿಂದ 2017 ರವೆರೆಗೆ ದಾವಾ ಆಸ್ತಿಯನ್ನು ಅಳತೆ ಮಾಡಿ ಗುರುತಿಸುವಂತೆ ಪ್ರತಿ ವರ್ಷ ಅರ್ಜಿ ಕೊಟ್ಟಿದ್ದೇನೆ. ನನಗೆ ವಾಸ ಮಾಡಲು ಜಾಗ ಇಲ್ಲದೆ ಇರುವುದರಿಂದ ಹೀಗೆ ಅರ್ಜಿ ಸಲ್ಲಿಸಿದ್ದೆ. ಸಾಕ್ಷಿಯು ಮುಂದುವರೆದು ಅಕ್ಕಪಕ್ಕದವರಿಂದ ಆಸ್ತಿಯ ಕುರಿತು ಯಾವುದೇ ತಕರಾರು ಅಥವಾ ಜಗಳ ಆಗಬಾರದು ಎಂಬ ಉದ್ದೇಶದಿಂದ ಆಸ್ತಿಯನ್ನು ಅಳತೆ ಮಾಡಿ ಗುರುತಿಸುಕೊಡುವಂತೆ ಅರ್ಜಿ ಸಲ್ಲಿಸಿದ್ದೆನು.

12. ದಾವಾ ಸ್ವತ್ತು ನನಗೆ ಮಂಜೂರು ಆಗಿದೆ ಎಂದು ಹೇಳುವುದಕ್ಕಿಂತ ಮೊದಲು ಮತ್ತು ಈವರೆಗೆ ದಾವಾ ಸ್ವತ್ತನ್ನು ಯಾವುದೇ ಅಧಿಕಾರಿಗಳು ಬಂದು ಅಳತೆ ಮಾಡಿ ಗುರುತಿಸಿಲ್ಲ. ಸಾಕ್ಷಿಯು ಮುಂದುವರೆದು 2017 ರಲ್ಲಿ ಗ್ರಾಮಪಂಚಾಯ್ತಿಯ ಕಾರ್ಯದರ್ಶಿಗಳು ಅಳತೆ ಮಾಡಲು ಬಂದಾಗ ಅಕ್ಕ ಪಕ್ಕದವರು ತಕರಾರು ಮಾಡಿ ಗಲಾಟೆ ಮಾಡಿದರು ನಂತರ ತಹಸೀಲ್ದಾರ್ ರವರು ಬಂದು ಗ್ರಾಮ ಠಾಣ ಗುರುತಿಸಿದ ನಂತರ ನಿವೇಶನಗಳನ್ನು ಹಂಚಿಕೆ ಮಾಡಿಕೊಡುತ್ತೇವೆ ಎಂದು ಹೇಳಿದರು ಎಂದು ನುಡಿಯುವರು.

13. ದಾವಾ ಸ್ವತ್ತು ನಿಖರವಾಗಿ ಎಲ್ಲಿ ಬರುತ್ತದೆ ಎಂದು ನಿಖರವಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಸ್ವಾಧೀನದಲ್ಲಿರುವ ಸ್ವತ್ತೇ ದಾವಾ ಸ್ವತ್ತು ಮತ್ತು ಅಳತೆ ಮಾಡಿದರೆ ಅದೇ ಸ್ವತ್ತು ಬರುತ್ತದೆ ಎಂದು ನುಡಿಯುವರು.

14. ದಾವಾ ಸ್ವತ್ತು ಮಂಜೂರು ಆಗಿದೆ ಎಂದು ತೋರಿಸಲು ಯಾವುದೇ ದಾಖಲಾತಿಗಳು ಇಲ್ಲ. ಸಾಕ್ಷಿಯು ಮುಂದುವರೆದು ಚಕ್ಕುಬಂದಿ ಇದೆ ಎಂದು ನುಡಿಯುವರು. ದಾವಾ ಸ್ವತ್ತು ನನಗೆ ಮಂಜೂರು ಆಗಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿ ಇದೆ.** **ನನ್ನ ಸಮಕ್ಷಮ**

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ನ್ಯಾಯಾಲಯ, ನಾಗಮಂಗಲ.**